to the Speaker in his chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day irrespective of the fact that the notice had been given on the previous day. ಅದಕ್ಕೋಸ್ಕರ ತಾವು ಬೇಕಾದರೆ ನನ್ನ ಛೇಂಬರಿಗೆ ಬನ್ನಿ ನನಗೆ ಕನ್‌ವಿನ್ಸ್ ಮಾಡಿ, ನನಗೆ ಕನ್‌ವಿನ್ಸ್ ಮಾಡಿದರೆ I will permit you. Now discussion and voting on the demands for grants for the year 1986-87.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ದಯವಿಟ್ಟು ನೀವು ಕುಳಿತುಕೊಳ್ಳಿ. ನೀವು ಏಕೆ ಎದ್ದು ನಿಲ್ಲುತ್ತೀರಿ.

ಅಧ್ಯಕ್ಷರು.—ಸ್ಪೀಕರ್ ಎದ್ದುನಿಲ್ಲುವ ಅರ್ಥವೇನೆಂದರೆ, ಇದರ ಪ್ರಶ್ನೆ ಮಂತ್ರಿಯಲಿಕ್ಕೆ ಹತ್ತಿದೆ. ಇದು ಮುಗಿದ ಮೇಲೆ ಡಿಮ್ಯಾಂಡ್ ಶುರು ಮಾಡಬೇಕು. ನಂತರ ನಾನು ಛೇಂಬರಿಗೆ ಹೋಗುತ್ತೇನೆ, ತಾವು ನನ್ನ ಛೇಂಬರಿಗೆ ಬನ್ನಿ. ಡಿಸ್ಕಸ್ ಮಾಡಿ ನನಗೆ ಕನ್‌ವಿನ್ಸ್ ಮಾಡಿ, ಈಗ ಬೇಡ. ಈಗ ಮಂತ್ರಿಗಳು ಡಿಮ್ಯಾಂಡ್ಸ್ ಮಂಡಿಸಲಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಿಲ್ಲ. ಆ ಉದ್ದೇಶ ಕೂಡ ನಮಗೆ ಇಲ್ಲ. ಹಿಂದೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಸಬ್ಮಿಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದುದರಿಂದ ಹೇಳುತ್ತಾ ಇದ್ದೇನೆ.

ಅಧ್ಯಕ್ಷರು.—ನನ್ನ ಛೇಂಬರಿಗೆ ಬನ್ನಿ, ಕನ್‌ವಿನ್ಸ್‌ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—Don't record, ಈಗ ಬಂಗಾರಪ್ಪನವರು ಏನು ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

* * *

ಶ್ರೀ ಎಸ್. ಬಂಗಾರಪ್ಪ.—ನಾವು ಹಾಗಿದ್ದರೆ ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಿರೋಧಪಕ್ಷದ ನಾಯಕರು ಮೊದಲ್ಗೊಂಡು ಎಲ್ಲಾ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ 4 — ವಿಾನಂಗಾರಿಕೆ

ಶ್ರೀ ಕೆ. ವೈಲೇಗೌಡ (ಮತ್ಸ್ಯೋದ್ಯಮ ಮತ್ತು ಬಂದರು ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಭಾಧ್ಯಕ್ಷರು ರಿಕಾರ್ಡ್ ಮಾಡಬಾರದೆಂದು ಸೂಚಿಸಿದ್ದರಿಂದ ರಿಕಾರ್ಡ್ ಮಾಡಿಲ್ಲ.)